ಓ ಎಸ್ ನಂ:455/2014
ಪಿ. ಡಬ್ಲ್ಯೂ : 7

**ದಿ: 08.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಎನ್ ಜಿ ವಕೀಲರಿಂದ**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

ನಿ ಪಿ 41 ನ್ನು ನಾನೇ ನೋಟರಿ ಮಾಡಿದ್ದೇನೆ. ಎಲ್ಲ ಪಾರ್ಟಿಗಳು ನನ್ನ ಮುಂದೆ ಸಹಿ ಮಾಡಿದ್ದಾರೆ.ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ 41 ಸಿ ಎಂದು ಗುರುತಿಸಲಾಯಿತು. ನೋಟರಿಯ ರಿಜಿಸ್ಟರ್ ನಲ್ಲಿಯೂ ಸಹ ಅವರ ಹೆಬ್ಬೆಟ್ಟಿನ ರುಜು ಹಾಗೂ ಸಹಿ ಪಡೆದಿದ್ದೇನೆ.

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಜಿ ಪಿ ವಕೀಲರಿಂದ :**

ನಾನು 2015 ರಿಂದ ನಾನು ಸೆಂಟ್ರಲ್ ನೋಟರಿಯಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಆಫೀಸ್ ತಾಲ್ಲೂಕು ಆಫೀಸ್ ಹಿಂಭಾಗ ಡೂಮ್ ಲೈಟ್ ಸರ್ಕಲ್ ಹತ್ತಿರ ಇರುತ್ತದೆ. ವಿಲ್ ನೋಟರಿ ಮಾಡುವಾಗ ಪೋಟೋಗಳನ್ನು ಅಂಟಿಸಬೇಕು ಎಂದರೆ ಸರಿ. ಅವರು ಕೊಟ್ಟಿಲ್ಲದ ಕಾರಣ ಪೋಟೋಗಳನ್ನು ಅಂಟಿಸಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ವಿಲ್ ಗೆ attest ಮಾತ್ರ ಮಾಡಿದ್ದೇನೆ. attest ಮಾಡುವಾಗ ಪತ್ರ ಬರೆದವರು ನಮ್ಮ ಮುಂದೆ ಬರುವ ಅವಶ್ಯಕತೆ ಇಲ್ಲ ಎಂದು ಸಾಕ್ಷಿ attest ಮಾಡುವವರು ಬೇಕಾಗುತ್ತದೆ ಎಂದು ಹೇಳುತ್ತಾರೆ. ನಾವು attest ಮಾಡುವಾಗ original ಪತ್ರವನ್ನು ನೋಡಿ ಸೀಲ್ ಹಾಕಿ ಕೊಡುತ್ತೇವೆ. ನಿ ಪಿ 41 original ಪತ್ರ ಇರುತ್ತದೆ ಅದರ ಮೇಲೆ ನಾನು ಸಹಿ ಮಾಡಿದ್ದೇನೆ. original ಪತ್ರವನ್ನು ನೋಡಿ ಅದರ ಪತ್ರಗೆ ಸಹಿ ಮಾಡಿಕೊಡುವುದು attested ಎಂದರೆ ಸರಿ. ವಿಲ್ ನಲ್ಲಿ ನಾನು ಸಹಿ ಮಾಡುವಾಗ ಅದರ ಪ್ರತಿಗೆ attested ಮಾಡುತ್ತೇನೆ ಎಂದಾಗಲಿ ಅಥವಾ swear ಮಾಡಿಸುತ್ತಿದ್ದೇನೆ ಎಂದು ಬರೆದಿಲ್ಲಎಂದರೆಸ ರಿ. ಅದರಲ್ಲಿ ಸೀಲು true copy ಎಂದು ಇದೆ ಎಂದರೆ ಸರಿ. Original ಪತ್ರಕ್ಕೆ ನೋಟರಿಯವರು ಸಹಿ ಮಾಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನನ್ನ ಬಳಿಗೆ ಪತ್ರ ಬಂದಾಗ ಪಾರ್ಟಿಗಳು ಮತ್ತು ಲಾಯರ್ ಬಂದಿದ್ದರು.

ನನ್ನ ಬಳಿ ಹಿರಿಯಣ್ಣ ಲಾಯರ್ ಪಾರ್ಟಿಗಳನ್ನು ಕರೆದುಕೊಂಡು ಬಂದಿದ್ದರು. ನೋಟರಿ ರಿಜಿಸ್ಟರ್ ನಲ್ಲಿ ನಾನು ಹಿರಿಯಣ್ಣ ಇವರ ಸಹಿ ಪಡೆದಿಲ್ಲ ಎಂದರೆ ಸರಿ. ಫೀಜು ಪಡೆದ ಬಗ್ಗೆ ರಶೀದಿ ಹಾಕಬೇಕೆಂದರೆ ಸರಿ. ನೋಟರಿ ರಿಜಿಸ್ಟರ್ ನಲ್ಲಿ ರಶೀದಿ ನಂಬರ್ ಇಲ್ಲ ಎಂದರೆ ಸರಿ. ನೋಟರಿ Signature ನಿ ಪಿ 41 ರಲ್ಲಿ ಇಲ್ಲ

ಎಂದರೆ ಸರಿಯಲ್ಲ. ನಾನು ಸಣ್ಣ ಸಹಿ ಮಾಡಿದ್ದೇನೆಂದು ಸಾಕ್ಷಿ ಹೇಳುತ್ತಾರೆ. ನೋಟರಿ ರಿಜಿಸ್ಟರ್ ನಲ್ಲಿ ನಾನು ನೋಟರಿ ಮಾಡಿದ ನಂತರ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಕೆಲವು ಎಂಟ್ರಿಗಳಿಗೆ ಸಹಿ ಮಾಡಿಲ್ಲ. ಕ್ರಮಸಂಖ್ಯೆ 47 ರ ಮುಂದೆ ನಾನು ಸಹಿ ಮಾಡಿಲ್ಲ ಎಂದರೆಸರಿಯಲ್ಲ. (ಸಾಕ್ಷಿ ನೋಟರಿ ರಿಜಿಸ್ಟರ್ ನ್ನು ತಂದಿದ್ದು ಅದನ್ನು ಪರಿಶೀಲಿಸಿ ವಾಪಸ್ ಕೊಡಲಾಯಿತು. ) ಕ್ರಮಸಂಖ್ಯೆ 41, 43, 46 ಮತ್ತು 48 ಇವುಗಳನ್ನು ಯಾವ ಉದ್ದೇಶಕ್ಕಾಗಿ ಮಾಡಿದೆ ಎಂದು ಬರೆದಿಲ್ಲ ಎಂದರೆ ಸರಿ. ನೋಟರಿ ರಿಜಿಸ್ಟರ್ ನಲ್ಲಿ ಕ್ರಮಸಂಖ್ಯೆ 47 ರ ಮುಂದೆ ಹೆಬ್ಬೆಟ್ಟಿನ ರುಜುವನ್ನು ಒಂದರ ಮೇಲೆ ಒಂದು ಹಾಕಿಸಿದ್ದೇವೆ ಎಂದರೆ ಸರಿಯಲ್ಲ. ಪಾರ್ಟಿ ಕಾರಿನಲ್ಲಿ ನನ್ನ ಬಳಿಗೆ ಬಂದಿದ್ದರು. ಅವರಿಗೆ ಕಾಯಿಲೆ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ, ನನ್ನ ಬಳಿ ಬಂದಾಗ ನಿ ಪಿ 41 ನ್ನು ಅವರು ರೆಡಿ ಮಾಡಿಕೊಂಡು ಬಂದಿದ್ದರು. ಸಾಕ್ಷಿದಾರರು ನನ್ನ ಬಳಿ ಬಂದಿರಲಿಲ್ಲ. ನನ್ನ ಬಳಿ ಹಿರಿಯಣ್ಣ ವಕೀಲರು ಮತ್ತು ವಿಲ್ ಮಾಡಿದವರು ಮಾತ್ರ ಬಂದಿದ್ದರು. ಈರಮ್ಮ ಇವರು ನನ್ನ ಬಳಿ ಬಂದಿಲ್ಲ ಎಂದರೆ ಸರಿಯಲ್ಲ. ಹಿರಿಯಣ್ಣ ವಕೀಲರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ ನ್ನು ಮಾಡಿದ್ದರೆ ನಾನು ಅವರಿಗೆ ಪ್ರಮಾಣವಚನ ಹೇಳಿ ಸಹಿ ಮಾಡಿಕೊಡಬೇಕಾಗುತ್ತದೆ ಎಂದರೆ ಸರಿ. ನಾನು ವಿಲ್ ನ ಸತ್ಯಾಸತ್ಯತೆ ಬಗ್ಗೆ ಈರಮ್ಮ ಇವರನ್ನು ವಿಚಾರಿಸಿಲ್ಲ. ಈರಮ್ಮ ನನ್ನ ಬಳಿ ಬಂದಿಲ್ಲಮತ್ತು ಹೆಬ್ಬೆಟ್ಟು ಹಾಕಿಲ್ಲಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಪ್ರಮಾಣವಚನ ಮಾಡಿಸಿದ್ದೇನೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಪ್ರಾಸಾ 4 ರವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**